C.R.P.67

Form No.4 (Civil)
Deposition Sheets
(R.P.No.57)

## **2**ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮಂಡ್ಯ.

### ಎಸ್.ಸಿ. ಸಂಖ್ಯೆಃ 113/2022

ಪ್ರಾಸಾ. 07 ಚಾಸಾ. 07

| | |
|---|---|
| ಸಾಕ್ಷಿದಾರರ ಹೆಸರು | ಮಹದೇವಯ್ಯ |
| ತಂದೆಯ ಹೆಸರು | ನಂಜಪ್ಪ |
| ವಯಸ್ಸು | 55 ವರ್ಷಗಳು |
| ಉದ್ಯೋಗ | ವ್ಯವಸಾಯ |
| ವಾಸ | ದೇವಪಟ್ಟಣ |

ಸಾಕ್ಷಿಯನ್ನು ದಿನಾಂಕಃ 24.07.2026 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ

ಚಾಸಾ-2 ನನ್ನ ಅತ್ತಿಗೆ, ಚಾಸಾ-1 ಚಾಸಾ-2 ರವರ ಗಂಡ, ಚಾಸಾ-1 ನನ್ನ ಸಹೋದರ. ಚಾಸಾ-8 ರಿಂದ 11 ಗೊತ್ತು. ಚಾಸಾ-3 ಈತನು ಚಾಸಾ-1 ಮತ್ತು 2 ರವರ ಮಗ. ಮೃತ ಸಂಧ್ಯಾ ಈಕೆಯು ಚಾಸಾ-1 ಮತ್ತು 2 ರವರ ಮಗಳು. 1ನೇ ಆರೋಪಿಯು ಮೃತ ಸಂಧ್ಯಾಳ ಗಂಡ. 2ನೇ ಆರೋಪಿಯು 1ನೇ ಆರೋಪಿಯ ತಂದೆ.

2. ನಾಗರಾಜಪ್ಪ, ಶಿವಸ್ವಾಮಿ, ನಾನು, ಸೋಮಣ್ಣ ಎಲ್ಲರೂ ಮದುವೆಯ ಮಾತುಕತೆಯಲ್ಲಿ ಭಾಗವಹಿಸಿದ್ದೆವು. 1ನೆ ಆರೋಪಿಯು ಒಂದೂವರೆ ಲಕ್ಷ ವರದಕ್ಷಿಣೆ ಕೇಳಿದನು, ಚಾಸಾ-1 ಎಂಭತ್ತು ಸಾವಿರ ವರದಕ್ಷಿಣೆ ಕೊಡಲು ಒಪ್ಪಿದನು. ಮದುವೆಯಾದ ಮೇಲೆ ಮೃತ ಸಂಧ್ಯಾ ಗಂಡನ ಮನೆಯಲ್ಲಿದ್ದಳು.

3. 2-3 ತಿಂಗಳ ಸಮಯ ಚೆನ್ನಾಗಿದ್ದಳು, ನಂತರ ತವರು ಮನೆಗೆ ಬಂದಿದ್ದಳು. ನಂತರ 1ನೇ ಆರೋಪಿ ಹಣ ಕೇಳುತ್ತಿರುವುದಾಗಿ ಹೇಳಿದಳು, ಚಾಸಾ-3 ರವರ ಫೋನ್ ಪೇ ಮೂಲಕ ಚಾಸಾ-1 1ನೇ ಆರೋಪಿಗೆ ಹಣ ಕೊಟ್ಟಿದನು. ನಂತರ 1ನೇ ಆರೋಪಿ ಚಾಸಾ-2 ರವರ ಮಾಂಗಲ್ಯ ಸರವನ್ನು ತೆಗೆದುಕೊಂಡಿರುವುದಾಗಿ ಗೊತ್ತಾಯಿತು.

4. ನಂತರ ಮೃತ ಸಂಧ್ಯಾ ಈಕೆ ಬಹಳ ಟಾರ್ಚರ್ ಆಗುತ್ತಿದೆ ಎಂದು ಹೇಳಿದಳು. ತವರು ಮನೆಯಲ್ಲಿಯೇ ಇರು ಎಂದು ನಾನು ಆಕೆಗೆ ಹೇಳಿದೆನು ಮತ್ತು ಕಾಲೇಜಿಗೆ ಹೋಗಲು ಹೇಳಿದೆನು. ಮೃತ ಸಂಧ್ಯಾ ಚಾಸಾ-1 ರವರ ಮನೆಯಲ್ಲಿದ್ದಳು ಮತ್ತು ಕೆ.ಎಂ. ದೊಡ್ಡಿಯ ಕಂಪ್ಯೂಟರ್ ಕ್ಲಾಸಿಗೆ ಹೋಗುತ್ತಿದ್ದಳು. ಒಂದು ದಿನ ಮೃತ ಸಂಧ್ಯಾ ಕಾಣೆಯಾಗಿದ್ದಳು, ಆರೋಪಿತರನ್ನು ವಿಚಾರಿಸಿದಾಗ ಆಕೆ ಬಂದಿಲ್ಲ ಎಂದು ಹೇಳಿದರು, ನಂತರ ಮಿಸ್ಸಿಂಗ್ ಕಂಪ್ಲೇಂಟ್ ಕೊಟ್ಟೆವು.

5. ನಂತರ ಕುಂದೂರು ಬೆಟ್ಟದ ಹತ್ತಿರ ನಾಲೆಯಲ್ಲಿ ಶವ ಸಿಕ್ಕಿರುವುದಾಗಿ ಪೊಲೀಸರು ಹೇಳಿದರು. ಪೊಲೀಸರು ಚಾಸಾ-11 ರವರಿಗೆ ಈ ವಿಷಯ ತಿಳಿಸಿದ್ದರು. 1ನೇ ಆರೋಪಿ ಮೃತ ಸಂಧ್ಯಾಳನ್ನು ನೀರಿನಲ್ಲಿ ಅಮುಕಿ ಸಾಯಿಸಿದ್ದಾನೆ ಎಂದು ಗೊತ್ತಾಯಿತು. ಪೊಲೀಸರು ನನ್ನ ಹೇಳಿಕೆ ಪಡೆದಿದ್ದಾರೆ.

<u>ಆರೋಪಿತರ ಪರ ವಕೀಲರಿಂದ ಪಾಟೀ ಸವಾಲುಃ-</u>

ಮೃತ ಸಂಧ್ಯಾ ಬಿ.ಎ. ಪದವೀಧರಳಾಗಿದ್ದಳು. ಅವಳಿಗೆ ಮದುವೆಯಾಗಲು ಇಷ್ಟವಿರಲಿಲ್ಲ ಎಂದರೆ ಆಕೆ ಹಾಗೆ ಹೇಳಿರಲಿಲ್ಲ. ಆಕೆಗೆ ಮೊದಲು ಬೇರೆ ನಿಶ್ಚಿತಾರ್ಥ ಆಗಿತ್ತು ಎನ್ನುವುದು ನನಗೆ ಗೊತ್ತಿಲ್ಲ. ಮೃತ ಸಂಧ್ಯಾ ಯಾಕೆ ಒಪ್ಪಲಿಲ್ಲ ಎಂದು ನನಗೆ ಗೊತ್ತಿಲ್ಲ, ಆ ನಿಶ್ಚಿತಾರ್ಥದ ಬಗ್ಗೆ ನನಗೆ ಗೊತ್ತಿಲ್ಲ.

2. ಕಷ್ಟ ಇರುವುದರಿಂದ ಮದುವೆ ಮಾಡಿಕೊಡಲಾಗುವುದಿಲ್ಲ ಎಂದು ಚಾಸಾ-1 ಮದುವೆಯ ಮಾತುಕತೆಯಲ್ಲಿ ಹೇಳಿದರು. ಮಾತುಕತೆಯ ಮೊದಲು

ಯಾವುದೇ ವಿಷಯ ನನಗೆ ಗೊತ್ತಿರಲಿಲ್ಲ. ಮದುವೆಯ ಮಾತುಕತೆಯಲ್ಲಿ ಹಾಗಲಹಳ್ಳಿಯವರು ಯಾರು ಇದ್ದರು ಎಂದು ನನಗೆ ಗೊತ್ತಿಲ್ಲ. ಸದರಿ ಮಾತುಕತೆಯಲ್ಲಿ 1 ಮತ್ತು 2 ನೇ ಆರೋಪಿತರು ಏನು ಮಾತನಾಡಿದರು ಎಂದು ನನಗೆ ಗೊತ್ತಿಲ್ಲ ಎನ್ನುವುದು ಸರಿಯಲ್ಲ. ನನ್ನ ಸಮಕ್ಷಮ ಚಾಸಾ-1 ಆರೋಪಿಗೆ ಹಣ ಕೊಟ್ಟಿಲ್ಲ.

3. 1 ನೇ ಆರೋಪಿಗೆ ಹಣ ಕೊಡುವುದು ನಾನು ನೋಡಿಲ್ಲ. ಬೇರೆಯವರು ಹೇಳಿದ್ದರಿಂದ ನನಗೆ ಗೊತ್ತಾಗಿದೆ ಎಂದರೆ ನನ್ನ ಬಾವ ಮೈದ ಹೇಳಿದ್ದರಿಂದ ಗೊತ್ತಾಯಿತು. 1 ನೇ ಆರೋಪಿ ಮತ್ತು ಸಂಧ್ಯಾ ಇವರ ಮದುವೆಯಾದ ನಂತರ ಅವರ ಸಂಸಾರದ ಬಗ್ಗೆ 1 ನೇ ಆರೋಪಿಯನ್ನು ನಾನು ಎಂದೂ ಕೇಳಿಲ್ಲ. ಮದುವೆಯಾದ ನಂತರ 1 ನೇ ಆರೋಪಿಯು ಚಾಸಾ-1 ರವರ ಮನೆಗೆ ಎಷ್ಟು ಬಾರಿ ಬಂದಿದ್ದಾನೆ ಎಂದು ನಾನು ಅಬ್ಸರ್ವ್ ಮಾಡಿಲ್ಲ. ಟಾರ್ಚರ್ ಕೊಡುವ ಬಗ್ಗೆ ಮೃತ ಸಂಧ್ಯಾ ನನಗೆ ಹೇಳಿದಳು ಎಂಬ ಸಂಗತಿಯನ್ನು ನಾನು ಬೇರೆ ಯಾರಿಗೂ ಹೇಳಿಲ್ಲ.

4. ಚಾಸಾ-2 ಮಾಂಗಲ್ಯ ಸರ ಕೊಟ್ಟ ಬಗ್ಗೆ ಚಾಸಾ-2 ನನಗೆ ಹೇಳಿಲ್ಲ ಮತ್ತು ನಾನೂ ಸಹ ಚಾಸಾ-2 ರವರನ್ನು ಕೇಳಿಲ್ಲ. ಮೃತ ಸಂಧ್ಯಾ ಆರೋಪಿತರ ಮನೆಯಲ್ಲಿದ್ದಾಗ ನಾನು ಒಂದು ಸಾರಿ ಹೋಗಿದ್ದೆ ಎಂದು ಅನಿಸುತ್ತದೆ, ಅದು ಅವರ ಮದುವೆಯಾದ ಹೊಸತರಲ್ಲಿ ಇರಬಹುದು. ನಾನು ಆರೋಪಿತರ ಮನೆಗೆ ಹೋದಾಗ ಎಲ್ಲರೂ ಸಂತೋಷವಾಗಿದ್ದರು.

5. ನಿಶ್ಚಿತಾರ್ಥದ ಸಮಯದಲ್ಲಿ ಈಗಲೇ ಮದುವೆ ಬೇಡ ನಾನು ಓದಬೇಕು ಎಂದು ಮೃತ ಸಂಧ್ಯಾ ಹೇಳುತ್ತಿದ್ದಳು ಎನ್ನುವುದು ನನಗೆ ಗೊತ್ತಿಲ್ಲ ಆದರೆ ಈಗಲೇ ಮದುವೆ ಬೇಡ ಓದು ಎಂದು ಹೇಳುತ್ತಿದ್ದೆನು. ಸಂಧ್ಯಾಳಿಗೆ ಟಾರ್ಚರ್ ಆಗುತ್ತಿದೆ ಎಂಬ ಬಗ್ಗೆ ನನ್ನ ಸಮಕ್ಷಮ ಯಾವುದೇ ಮಾತುಕತೆ ಆಗಿಲ್ಲ. ನಿಶ್ಚಿತಾರ್ಥ ಮಠದಲ್ಲಿ ನಡೆದಿರುತ್ತದೆ, ಸದರಿ ನಿಶ್ಚಿತಾರ್ಥಕ್ಕೆ ಎಷ್ಟು ಹಣ ಖರ್ಚಾಗಿರುತ್ತದೆ ಎಯಿನನಗೆ ಗೊತ್ತಿಲ್ಲ. ಸದರಿ

ನಿಶ್ಚಿತಾರ್ಥದ ಸಮಯದಲ್ಲಿ ಏನು ಮಾತುಕತೆ ಆಗಿತ್ತು ಎಂದು ನನಗೆ ಗೊತ್ತಿಲ್ಲ, ಅದು 1 ನೇ ಆರೋಪಿ ಮತ್ತು ಚಾಸಾ-1 ರವರಿಗೆ ಗೊತ್ತು. ಮದುವೆಯನ್ನು ಆರೋಪಿತರು ಮಾಡಿಕೊಳ್ಳಬೇಕು ಎಂಬುವ ವಿಷಯ ಹೊರತುಪಡಿಸಿ ಮದುವೆಯ ಮಾತುಕತೆಯಲ್ಲಿ ಬೇರೆ ಏನುವ ಮಾತುಕತೆ ಆಯಿತು ಎಂದು ನನಗೆ ಗೊತ್ತಿಲ್ಲ.

6. ಮದುವೆಯ ಖರ್ಚನ್ನು ಆರೋಪಿತರು ಭರಿಸಿರುತ್ತಾರೆ ಎನುನವುದು ನಿಜ. ಚಾಸಾ-1 ಈತನಿಗೆ ಜೀವನ ನಿರ್ವಹಣೆ ಕಷ್ಟ ಮತ್ತು ಆರ್ಥಿಕ ಸಾಮಾರ್ಥ್ಯ ಇಲ್ಲ ಎನ್ನುವುದು ನಿಜ. ದೂರಿನಲ್ಲಿ ಚಾಸಾ-1 ಏನು ಬರೆಸಿದ್ದಾರೆ ಎಂದು ನನಗೆ ಗೊತ್ತು. ಪೊಲೀಸರು ಹೇಳುವವರೆಗೆ ಶವ ಎಲ್ಲಿದೆ ಎಂದು ಗೊತ್ತಿರಲಿಲ್ಲ. ಪೊಲೀಸರಿಗೆ ಯಾರು ಹೇಳಿದ್ದಾರೆ ಎಂದು ನನಗೆ ಗೊತ್ತಿಲ್ಲ. ಸಾಕ್ಷಿಯು ಸ್ವತಃ ಹೇಳುತ್ತಾರೆ ಮೃತ ಸಂಧ್ಯಾ ವಿಷ ಕುಡಿದಿದ್ದಾಳೆ ಎಂದು ಮಾಹಿತಿ ಬಂದಿತ್ತು.

7. ದೂರು ಕೊಡುವಾಗ ನಮ್ಮ ಸ್ವಾಮೀಜೀ ಪ್ರಮುಖ ಪಾತ್ರ ವಹಿಸಿದ್ದರು ಎನ್ನುವುದು ಸರಿಯಲ್ಲ, ಆದರೆ ನಾನು ಕರೆದಿದ್ದರಿಂದ ಅವರು ಪೊಲೀಸ್ ಠಾಣೆಗೆ ಬಂದಿದ್ದರು. ದೂರು ಕೊಟ್ಟ ನಂತರ ನಾನು ಮತ್ತೆ ಪೊಲೀಸ್ ಠಾಣೆಗೆ ಹೋಗಿಲ್ಲ ಆದರೆ ಫೋನ್ ಮಾಡಿ ಕೇಳುತ್ತಿದ್ದೆನು. ಮಿಸ್ಸಿಂಗ್ ಕಂಪ್ಲೇಂಟ್ ಕೊಡುವಾಗ ಮಾತ್ರ ನಾನು ಪೊಲೀಸ್ ಠಾಣೆಗೆ ಹೋಗಿದ್ದೆನು, ನಂತರ ಹೋಗಿಲ್ಲ. ಶವ ನೋಡಿದ ಮೇಲೆ ಅಲ್ಲಿಯೇ ದುೂರು ಬರೆಸಿ ಕೊಟ್ಟಿದ್ದೆವು. ಶವ ನೋಡಿದ ನಂತರ ಪೊಲೀಸರು ಪೊಲೀಸ್ ಠಾಣೆಗೆ ನನ್ನನ್ನು ಕರೆಯಿಸಿ ಹೇಳಿಕೆ ಪಡೆದಿದ್ದಾರೆ. ನನ್ನ ಹೇಳಿಕೆ ಪಡೆದ ಪೊಲೀಸರ ಹೆಸರು ಹೇಳಲಾಗುವುದಿಲ್ಲ. ಶವ ಸಿಕ್ಕ 2-3 ದಿನಗಳ ನಂತರ ನಾನು ಪೊಲೀಸ್ ಠಾಣೆಗೆ ಹೋಗಿದ್ದೆನು.

8. ಮೃತ ಸಂಧ್ಯಾ ನನ್ನ ಜೊತೆ ಯಾವಾಗಲೂ ಟಾರ್ಚರ್ ಕೊಟ್ಟ ಬಗ್ಗೆ ಮಾತನಾಡಿಲ್ಲ ಎನ್ನುವುದು ಸರಿಯಲ್ಲ. ಚಾಸಾ-1 ಮೃತ ಸಂಧ್ಯಾಳನ್ನು

ಕಂಪ್ಯೂಟರ್ ಕ್ಲಾಸಿಗೆ ಸೇರಿಸಿದ್ದರು. ಮದುವೆಯಾದ ನಂತರ ಮೃತ ಸಂಧ್ಯಾ ಎಷ್ಟು ದಿನಗಳವರೆಗೆ ಗಂಡನ ಮನೆಯಲ್ಲಿದ್ದಳು ಎಂದು ನನಗೆ ಗೊತ್ತಿಲ್ಲ.

ಮೃತ ಸಂಧ್ಯಾಳ ಸಾವಿಗೂ ಆರೋಪಿತರಿಗೂ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸ. ಒ.

(ಹತ್ತಿಕಾಳ ಪ್ರಭು ಎಸ್)
2 ನೇ ಅಪರ ಜಿಲ್ಲಾ ಮತ್ತು
ಸತ್ರ ನ್ಯಾಯಾಧೀಶರು, ಮಂಡ್ಯ.